ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

12

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು ಸದಸ್ಯರು

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE : 11/3/21

# ‘ಹೊಸತನವೇ ಇಲ್ಲದ ಬಜೆಟ್’

ಪ್ರಜಾವಾಣಿ ವಾರ್ತೆ 11-3-21

ಬೆಂಗಳೂರು: ‘ಈ ಬಜೆಟ್‌ನಲ್ಲಿ ಏನೂ ಇಲ್ಲ. ಕಳೆದ 10 ವರ್ಷಗಳ ಬಜೆಟ್‌ನ ಅಂಕಿ ಅಂಶ ತಿರುಗು ಮುರುಗು ಮಾಡಿದ್ದಾರೆ. ಅದೇ ಯೋಜನೆ, ಅದೇ ಅನುದಾನ. ಹಣಕಾಸು ಇಲಾಖೆ ಅಧಿಕಾರಿಗಳು ಮುಖ್ಯಮಂತ್ರಿಗೇ ಟೋಪಿ ಹಾಕಿದ್ದಾರೆ’ ಎಂದು ಆಡಳಿತ ಪಕ್ಷ ಬಿಜೆಪಿಯ ಎಚ್. ವಿಶ್ವನಾಥ್, ಸರ್ಕಾರಕ್ಕೇ ಚಾಟಿ ಬೀಸಿದರು.



ವಿಧಾನ ಪರಿಷತ್‌ನಲ್ಲಿ ವಿತ್ತೀಯ ಕಲಾಪದ ವೇಳೆ ಬುಧವಾರ ಮಾತನಾಡಿದ ಅವರು, ‘ಹಣಕಾಸು ಖಾತೆ ನಿಭಾಯಿಸಿರುವ ಸಿದ್ದರಾಮಯ್ಯ, ಕುಮಾರಸ್ವಾಮಿ, ಯಡಿಯೂರಪ್ಪ ಹಲವು ಬಾರಿ ಬಜೆಟ್ ಮಂಡಿಸಿದ್ದಾರೆ. ಹಾಗಂತ, ಅವರು ಆರ್ಥಿಕ ತಜ್ಞರಲ್ಲ. ಆರ್ಥಿಕ ಖಾತೆಗೆಂದೇ ಪ್ರತ್ಯೇಕ ಸಚಿವರು ಬೇಕು’ ಎಂದು ಪ್ರತಿಪಾದಿಸಿದರು.

‘33 ಇಲಾಖೆಗಳಲ್ಲಿ ಹಣಕಾಸು, ಡಿಪಿಎಆರ್, ಕಾನೂನು ಈ ಮೂರು ಅತಿ ಮುಖ್ಯವಾದುದು. ಈ ಪೈಕಿ, ಮೊದಲ ಎರಡು ಯಡಿಯೂರಪ್ಪ ಬಳಿ ಇದೆ. ಹಣಕಾಸು ಸೇರಿದಂತೆ ಪ್ರಮುಖ ಖಾತೆಗಳನ್ನು ಮುಖ್ಯಮಂತ್ರಿ ಇಟ್ಟುಕೊಳ್ಳಬಾರದು. ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಹಣಕಾಸು ಖಾತೆ ಹೊಂದಿರಲಿಲ್ಲ. ನಮ್ಮ ಮುಖ್ಯಮಂತ್ರಿ ಏಕೆ ಇಷ್ಟೊಂದು ಖಾತೆ ಇಟ್ಟುಕೊಂಡಿದ್ದಾರೊ ಗೊತ್ತಿಲ್ಲ’ ಎಂದರು.

‘ಈ ಹಿಂದೆ ಹಣಕಾಸು ಇಲಾಖೆಗೆ ಪ್ರತ್ಯೇಕ ಸಚಿವರಿದ್ದರು. ಈಗ ಮುಖ್ಯಮಂತ್ರಿಯೇ ಅದನ್ನು ನಿಭಾಯಿಸುತ್ತಿದ್ದಾರೆ. ಮೈತ್ರಿ ಸರ್ಕಾರ ಅವಧಿಯಲ್ಲಿ ಹಣಕಾಸು ಖಾತೆಯನ್ನು ಬೇರೆಯವರಿಗೆ ಕೊಡಿ ಎಂದು ಕುಮಾರಸ್ವಾಮಿಗೆ ಕೇಳಿದ್ದಕ್ಕೆ, ನನಗೇನು ಸಾಮರ್ಥ್ಯ ಇಲ್ವಾ, ನಾನು ನಿಭಾಯಿಸಲ್ವಾ ಎಂದು ಕೇಳಿದ್ರು. ಮುಖ್ಯಮಂತ್ರಿಯೇ ಆ ಖಾತೆ ನಿಭಾಯಿಸಿದರೆ ಅದು ಸತ್ತು ಹೋಗುತ್ತದೆ. ಹೀಗಾಗಿ ಬೇರೆಯವರಿಗೆ ಕೊಡಿ ಎಂದೆ. ಇದರಿಂದ ನನಗೂ ಕುಮಾರಸ್ವಾಮಿಗೆ ಭಿನ್ನಾಭಿಪ್ರಾಯ ಮೂಡಿತು’ ಎಂದರು.

‘ಸುಮಾರು ಒಂದೂವರೆ ಲಕ್ಷ ಮಂದಿ ಹೊರಗುತ್ತಿಗೆ ನೌಕರರಿದ್ದಾರೆ. ಅವರನ್ನು ನೇಮಕ ಮಾಡಿರುವ ಗುತ್ತಿಗೆದಾರರು ಬಹುತೇಕ ಐಎಎಸ್ ಅಧಿಕಾರಿಗಳ ಸಂಬಂಧಿಕರು’ ಎಂದು ವಿಶ್ವನಾಥ್ ಹೇಳುತ್ತಿದ್ದಂತೆ, ಜೆಡಿಎಸ್‌ನ ಶ್ರೀಕಂಠೇಗೌಡ, ‘ಅಧಿಕಾರಿಗಳ ಪತ್ನಿಯರು, ಉಪಪತ್ನಿಯರ ಹೆಸರಿನಲ್ಲೂ ಗುತ್ತಿಗೆ, ಹೊರಗುತ್ತಿಗೆ ನಿರ್ವಹಣೆಯಾಗುತ್ತಿದೆ’ ಎಂದರು.

## ‘ವಿಧಾನಸೌಧ ಈಗ ಮಾಲ್; ದಲ್ಲಾಳಿಗಳ ಅಡ್ಡೆ’

‘ವಿಧಾನಸೌಧ ಸದಾ ಸುಂದರಿ. ಈ ಸುಂದರಿಗೆ ಎಲ್ಲರೂ ಮಾರು ಹೋಗಿದ್ದಾರೆ. ಒಂದಲ್ಲ ಒಂದು ದಿನ ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತುಕೊಳ್ಳುತ್ತೇನೆಂದು ಮನೆ, ಮಠ ಮಾರಿಕೊಂಡು ಬರುತ್ತಾರೆ. ಆದರೆ, ಸಾಧ್ಯವಾಗದೆ ಪಿಶಾಚಿಗಳಾಗಿ ಇದರ ಸುತ್ತ ಸುತ್ತುತ್ತಿದ್ದಾರೆ. ‘ಹಳ್ಳಿ ಹಕ್ಕಿ’ ಪುಸ್ತಕದಲ್ಲಿ ಇದನ್ನು ಬರೆದಿದ್ದೇನೆ’ ಎಂದು ವಿಶ್ವನಾಥ್ ಹೇಳಿದರು.

ಬಿಜೆಪಿಯ ಭಾರತಿ ಶೆಟ್ಟಿ ಮಧ್ಯಪ್ರವೇಶಿಸಿದಾಗ, ‘ನಿನಗಿಂತ ಸುಂದರಿ ಯಾರು ಇಲ್ಲ ಬಿಡಮ್ಮ’ ಎಂದೂ ಹಾಸ್ಯ ಚಟಾಕಿ ಹಾರಿಸಿದರು.

‘ವಿಧಾನಸೌಧ ಇಂದು ಮಾಲ್ ಆಗಿದೆ. ಏನು ಬೇಕಾದರೂ ಮಾರಾಟ ಮಾಡಬಹುದು, ಖರೀದಿ ಮಾಡಬಹುದು. ವರ್ಗಾವಣೆ, ಟೆಂಡರ್ ಕೊಡಿಸುವ ದಲ್ಲಾಳಿಗಳೇ ಹೆಚ್ಚಾಗಿದ್ದಾರೆ. ವಿರೋಧ ಪಕ್ಷಗಳು ಬಲವಾಗಿಲ್ಲ. ಹೊಂದಾಣಿಕೆ ರಾಜಕೀಯ ನಡೆಯುತ್ತಿದೆ. ಟೂರಿಂಗ್ ಟಾಕೀಸ್‌ನಲ್ಲಿ ಕರೆಂಟ್ ಹೋದಂಥ ಪರಿಸ್ಥಿತಿ ಈಗಿನದ್ದು. ಟೂರಿಂಗ್ ಟಾಕೀಸ್‌ನಲ್ಲಿ ಕರೆಂಟ್ ಹೋದರೆ ಯಾರು ಯಾರನ್ನು ಬೇಕಾದರೂ ತಬ್ಬಿಕೊಳ್ಳಬಹುದು’ ಎಂದು ವ್ಯಂಗ್ಯವಾಡಿದರು.